ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆಯಿತು, ತಮಗೆ ಈ ಮಾಹಿತಿಗಳನ್ನು ಕಳುಹಿಸಿಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಮಾಹಿತಿಗಳ ಪ್ರತಿಯನ್ನು ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಟ್ಟರು)

ಕೋಲಾರ ಜಿಲ್ಲೆಯಲ್ಲಿ ತುಂತುರು ಮತ್ತು ಹನಿ ನೀರಾವರಿಗೆ ಸಹಾಯಧನ

184 (1001) ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ ತುಂತುರು ಮತ್ತು ಹನಿ ನೀರಾವರಿಗೆ ಸಹಾಯಧನ ನೀಡುತ್ತಿರುವುದು ನಿಜವೇ;

ಆ) ಇದು ಯಾವ ವರ್ಷದಿಂದ ಜಾರಿಗೆ ಬಂದಿದೆ;

ಇ) ಹಾಗಾದರೆ ಅದರ ಪ್ರಮಾಣ ಎಷ್ಟು; ಇದರ ಪ್ರಯೋಜನ ಪಡೆಯುತ್ತಿರುವ ರೈತರೆಷ್ಟು;

ಈ) ಎಷ್ಟು ಜನ ರೈತರಿಗೆ ಇನ್ನೂ ಸಹಾಯಧನ ಬಿಡುಗಡೆ ಮಾಡಬೇಕಾಗಿದೆ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ (ತೋಟಗಾರಿಕೆ ಸಚಿವರು) :

ಅ) ಹೌದು. ಕೋಲಾರ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿಗೆ ಸಹಾಯಧನ ನೀಡಲಾಗುತ್ತಿದೆ.

ಆ) ಕೇಂದ್ರ ಸರ್ಕಾರದ ನೆರವಿನ ಯೋಜನೆಯು 1991–92ನೇ ವರ್ಷದಿಂದ ಜಾರಿಗೆ ಬಂದಿದೆ. ರಾಜ್ಯ ಸರ್ಕಾರದ ಸಂಪೂರ್ಣ ನೆರವಿನ ಯೋಜನೆಯು 2003–04ನೇ ವರ್ಷದಿಂದ ಜಾರಿಗೆ ಬಂದಿದೆ.

ಇ) ವಿವಿಧ ವರ್ಷಗಳಲ್ಲಿ ಸಹಾಯಧನ ಪ್ರಮಾಣವು 25% ನಿಂದ 100%ರವರೆಗೆ ಇರುತ್ತದೆ. ಅವಧಿವಾರು ಸಹಾಯಧನ ಪ್ರಮಾಣದ ವಿವರ ಕೆಳಗೆ ನೀಡಲಾಗಿದೆ.

ವರ್ಷ	ಸಹಾಯಧನ ಪ್ರಮಾಣ
1991–92 ರಿಂದ 95–96ರವರೆಗೆ	ಎಲ್ಲಾ ವರ್ಗದವರಿಗೆ 50% (ಕೇಂದ್ರ ಸರ್ಕಾರದ ಯೋಜನೆ)
1996–97 ರಿಂದ 99–2000ರವರೆಗೆ	ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತಿಸಣ್ಣ ರೈತರು, ಮಹಿಳೆಯರಿಗೆ 90% ಮತ್ತು ಸಾಮಾನ್ಯ ವರ್ಗದವರಿಗೆ 70% (ಕೇಂದ್ರ ಸರ್ಕಾರದ ಯೋಜನೆ)
2000–01 ರಿಂದ 2001–02ರವರೆಗೆ	ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತಿಸಣ್ಣ ರೈತರು, ಮಹಿಳೆಯರಿಗೆ 50% ಮತ್ತು ಸಾಮಾನ್ಯ ವರ್ಗದವರಿಗೆ 35% (ಕೇಂದ್ರ ಸರ್ಕಾರದ ಯೋಜನೆ)

ವರ್ಷ	ಸಹಾಯಧನ ಪ್ರಮಾಣ
2002–03	ಎಲ್ಲಾ ವರ್ಗದವರಿಗೆ 25% (ಕೇಂದ್ರ ಸರ್ಕಾರದ ಯೋಜನೆ)
2003–04 ರಿಂದ	ಎಲ್ಲಾ ವರ್ಗದವರಿಗೆ 25% (ಕೇಂದ್ರ ಸರ್ಕಾರದ ಯೋಜನೆ)
2005–06ರವರೆಗೆ	ಎಲ್ಲಾ ವರ್ಗದವರಿಗೆ 100% (ರಾಜ್ಯ ಸರ್ಕಾರದ ಯೋಜನೆ)
2006–07	ಎಲ್ಲಾ ವರ್ಗದವರಿಗೆ 50% (ಕೇಂದ್ರ ಸರ್ಕಾರದ ಯೋಜನೆ)
	ಎಲ್ಲಾ ವರ್ಗದವರಿಗೆ 100% (ರಾಜ್ಯ ಸರ್ಕಾರದ ಯೋಜನೆ)

ಇದರ ಪ್ರಯೋಜನವನ್ನು 2467 ರೈತರು ಪಡೆದಿರುತ್ತಾರೆ.

ಈ) 2005–06ನೇ ಸಾಲಿನ ಅಂತ್ಯಕ್ಕೆ 318 ರೈತರಿಗೆ ಸಹಾಯಧನ ಬಿಡುಗಡೆ ಮಾಡಬೇಕಿರುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ (ಶ್ರೀ ಕೆ.ಆರ್. ರಮೇಶ್‌ಕುಮಾರ್‌ರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಎಂದು ಪ್ರಶ್ನೆ ಪತ್ರಿಕೆಯಲ್ಲಿ ತಿಳಿಸಿರುತ್ತಾರೆ. ಈ ಪ್ರಶ್ನೆ ಮೀನುಗಾರಿಕೆ ಸಚಿವರಿಗೆ ಬರುತ್ತದೊ, ಮುಜರಾಯಿ ಸಚಿವರಿಗೆ ಬರುತ್ತದೊ, ಗೊತ್ತಿಲ್ಲ. ನನ್ನ ಪ್ರಕಾರ ಇದು ಕೃಷಿ ಇಲಾಖೆಗೆ ಬರಬೇಕು ಅಥವಾ ತೋಟಗಾರಿಕೆ ಸಚಿವರಿಗೆ ಬರಬೇಕು.

ಅಧ್ಯಕ್ಷರು : ತೋಟಗಾರಿಕೆ ಸಚಿವರು ಎಂದು ಹಾಕಿದಾರಲ್ಲಾ.....

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಪ್ರಶ್ನೆಗಳ ಪಟ್ಟಿಯಲ್ಲಿ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಎಂದು ಇದೆ. ಇಲ್ಲಿ ತೋಟಗಾರಿಕೆ ಸಚಿವರು ಎಂದು ಇಲ್ಲ. ಅದಕ್ಕೋಸ್ಕರ ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಈ ಪ್ರಶ್ನೆಗೆ ತೋಟಗಾರಿಕೆ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ತುಂತುರು ಮತ್ತು ಹನಿ ನೀರಾವರಿಗೆ ಸಹಾಯಧನ ಶೇ. 100ರಷ್ಟು ನಮ್ಮ ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಇದುವರೆಗೂ ಇದನ್ನು ಯಾವ ವರ್ಷದಿಂದ ಒದಗಿಸಿದ್ದೀರಿ. ಹಣವನ್ನು ಎಷ್ಟೆಷ್ಟು ಬಿಡುಗಡೆ ಮಾಡಿದ್ದೀರೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ. ಇದು ಆದ ಮೇಲೆ ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ : ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಗೆ 50 ಲಕ್ಷ ರೂಪಾಯಿಗಳನ್ನು ನಿಗದಿಗೊಳಿಸಿದ್ದು, ಈಗ 16.66 ಲಕ್ಷ ರೂಪಾಯಿಗಳನ್ನು ಮೊದಲನೆಯ ಕಂತಾಗಿ ಬಿಡುಗಡೆ ಮಾಡಲಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಇವತ್ತಿಗೂ ಕೂಡ ಸಾವಿರಾರು ಅರ್ಜಿಗಳು ಪೆಂಡಿಂಗ್‌ನಲ್ಲಿ ಇವೆ. ಅದು ನಮ್ಮ ಸರ್ಕಾರದಲ್ಲೂ ಇವೆ. ನಾನು ಏನು ಆಗಿನ ಸರ್ಕಾರದಲ್ಲಿ ಎಲ್ಲವನ್ನೂ ಕೊಟ್ಟು ಬಿಟ್ಟಿದ್ದೇವೆಂದು ಹೇಳುವುದಕ್ಕೆ ಇಚ್ಛಿಸುವುದಿಲ್ಲ. ಇದಕ್ಕೆ ಸರ್ಕಾರ ಒಂದು ಬದ್ಧತೆಯನ್ನು ಪ್ರದರ್ಶನ ಮಾಡಿದ ಮೇಲೆ ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹಾರ್ಟಿಕಲ್ಚರ್ ಕ್ರಾಪ್‌ಗೆ ಬಹಳ ಆದ್ಯತೆಯನ್ನು ಕೊಡುತ್ತೇವೆಂದು, ತಾವು ಶೇ.100ರಷ್ಟು ಸಹಾಯಧನವನ್ನು ಮಾಡಿದ್ದೀರಿ. ಈ ಹಣದ ಬಿಡುಗಡೆಯಲ್ಲಿ, ಅದು ಆರ್‌ಐಡಿಎಫ್‌ನಲ್ಲಿ ಕಳೆದ ಬಾರಿ 6 ಕೋಟಿ ಇಟ್ಟಿದ್ದು, ಇದುವರೆಗೂ ಹಣ ರಿಲೀಜ್ ಆಗಿಲ್ಲ. ಇದನ್ನು ಒಂದು ಬದ್ಧತೆಯಲ್ಲಿ, ಇಷ್ಟು ಹಣವನ್ನು ಕೋಲಾರ ಜಿಲ್ಲೆಗೆ, ಬಿಜಾಪುರ ಜಿಲ್ಲೆಗೆ ಶೇ. 100ರಷ್ಟು ಹಣವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಕಳೆದ ಬಜೆಟ್‌ನಲ್ಲಿ ಬೇರೆ ಜಿಲ್ಲೆಗಳಿಗೂ ಶೇ. 75ರಷ್ಟು ಹಣವನ್ನು ಕೊಟ್ಟಿದ್ದೀರಿ. ಅವುಗಳಿಗೆ ಇಷ್ಟು ಹಣವನ್ನು ಕೊಟ್ಟಿದ್ದೇವೆಂದು ಸರಿಯಾಗಿ ಹೇಳದೇ ಇದ್ದರೆ, ನಾವು ಇದನ್ನು ಬರೀ ಪತ್ರಿಕೆಗಳಲ್ಲಿ ಓದುವುದಕ್ಕೆ ಚೆನ್ನಾಗಿ ಇರುತ್ತದೆಯೇ ವಿನಃ ಅಲ್ಲಿ ಸಾವಿರಾರು ಅರ್ಜಿಗಳು ಸುಮಾರು ಎರಡು, ಮೂರು ವರ್ಷಗಳಿಂದ ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪೆಂಡಿಂಗ್ ಬಿದ್ದಿದೆ. ಅಲ್ಲಿ ಸಬ್ಸಿಡಿ ಸಿಗುತ್ತಿಲ್ಲ. ಅದಕ್ಕೆ ತಾವು ಏನಾದರೂ ಕ್ರಮಗಳನ್ನು ಜರುಗಿಸಿದ್ದೀರಾ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ : ಮಾನ್ಯ ಅಧ್ಯಕ್ಷರೇ, ಈ ವರ್ಷ ಸಾಕಷ್ಟು ರೈತರು ಮುಂದೆ ಬಂದಿದ್ದಾರೆ. ಈ ಸಲ ಎಷ್ಟು ಜನರು ಅರ್ಜಿಗಳನ್ನು ಹಾಕಿದ್ದಾರೆ, ಅವುಗಳ ಪರಿಶೀಲನೆಯನ್ನು ಮಾಡಲಾಗಿದೆ. ಅವುಗಳ ಬಗ್ಗೆ ಈ ಬಾರಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಲ್ಲ. ಇದಕ್ಕೆ ತಾವು ಹಣವನ್ನು ಒದಗಿಸುತ್ತೀರಾ? ಇದನ್ನು ತಾವು ಹೇಳಿದರೆ ಸಾಕು? ಹಣವನ್ನು ಒದಗಿಸುವಂಥಾದ್ದು ನೀವೋ ಅಥವಾ ಅವರೋ? ಈಗ ಬಜೆಟ್‌ನಲ್ಲಿ ಏನು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ, ಅದರ ಪ್ರಕಾರ ಹಣವನ್ನು ನೀವು ಇಟ್ಟಿದ್ದೀರಾ? ರಿಲೀಜ್ ಮಾಡಿದ್ದೀರಾ? ಇವತ್ತು ಸಾವಿರಾರು ಅರ್ಜಿಗಳು ಪೆಂಡಿಂಗ್ ಇವೆ. ರೈತರು ಹನಿ ನೀರಾವರಿಯನ್ನು ಮಾಡಿಸಿ ಬಿಟ್ಟಿದ್ದಾರೆ. ಆ ಕಂಪನಿಗಳವರು ದಿವಸ ರೈತರ ಹತ್ತಿರ ಬಂದು, ದಿವಸ ಓಡಾಡುವ ಸ್ಥಿತಿಗೆ ಬಂದಿದ್ದಾರೆ. ಆ ಕಡೆ ರೈತರು ಅವರಿಗೆ ಹಣ ಕೊಡುವಂಥ ಪರಿಸ್ಥಿತಿ ಇಲ್ಲ. ಈ ಕಡೆ ನೀವೂ ಹಣ ರಿಲೀಸ್ ಮಾಡಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರು ಏನು ಮಾಡಬೇಕು?

ಅಧ್ಯಕ್ಷರು : ಸಚಿವರು ನಿನ್ನೆ ಮೊನ್ನೆಯಷ್ಟೇ ಬಂದಿದ್ದಾರೆ. ಅವರಿಗೆ ಮಾಹಿತಿ ಇಲ್ಲ. ಆದ್ದರಿಂದ ಅವರಿಗೆ ಸ್ವಲ್ಪ ಕಾಲಾವಕಾಶ ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ : ಮುಖ್ಯಮಂತ್ರಿಗಳಿದ್ದಾರೆ. ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರೂ ಆಗಬಹುದು.

ಅಧ್ಯಕ್ಷರು : ಫೈಲ್‌ಗಳೆಲ್ಲಾ ಅವರ ಹತ್ತಿರ ಇರುತ್ತವೆ. ಮುಖ್ಯಮಂತ್ರಿಗಳಿಗೆ ಎಲ್ಲಾ ಹೇಗೆ ಗೊತ್ತಿರುತ್ತದೆ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಮುಖ್ಯಮಂತ್ರಿಗಳೇ, ಸಚಿವರು ಹೊಸಬರು ಎಂದು ಅಧ್ಯಕ್ಷರೇ ಹೇಳುತ್ತಿದ್ದಾರೆ. ಅದಕ್ಕೆ ನೀವೇ ಏನಾದರೊಂದು ಉತ್ತರ ಕೊಡಿ. ಡ್ರಿಪ್ ಇರಿಗೇಷನ್ 100 ಪರ್ಸೆಂಟ್ ಕೋಲಾರ ಮತ್ತು ಬಿಜಾಪುರದಲ್ಲಿ ಮಾಡಿದ್ದೀರಿ. ಇಡೀ ರಾಜ್ಯದಲ್ಲಿ 75 ಪರ್ಸೆಂಟ್ ಮಾಡಿದ್ದೀರಿ. ಇದರಲ್ಲಿ ಒಂದು ಬಿಡಿಗಾಸು ಹಣವೂ ಬಿಡುಗಡೆಯಾಗಿಲ್ಲ. ಸಾವಿರಾರು ರೈತರು ಡ್ರಿಪ್ ಇರಿಗೇಷನ್ ಮಾಡಿಸಿಕೊಂಡಿದ್ದು, ಮಾಡಿದಂಥ ಆ ಕಂಪನಿಗಳವರು ಪ್ರತಿ ದಿವಸ ರೈತರ ಹತ್ತಿರದ ಸಾಲಗಾರರು ಬಂದ ಹಾಗೆ ಬರುತ್ತಿದ್ದಾರೆ. ಅವರು ಸಾಲಗಾರರು, ಸರ್ಕಾರದವರಾದ ನೀವು ಸಾಕ್ಷಿದಾರರು. ನಿಮ್ಮ ಸಾಕ್ಷಿಯನ್ನು ನೋಡಿಕೊಂಡು ಕಂಪನಿಗಳವರು ಸಾಲ ಕೊಟ್ಟರು. ಆದ್ದರಿಂದ ಸಾಕ್ಷಿದಾರರಾದ ನೀವಾದರೂ ಎದ್ದು ನಿಂತು ಇಷ್ಟು ದಿವಸದಲ್ಲಿ ಕೊಡುತ್ತೇವೆ ಎಂದು ನೇರವಾಗಿ ಹೇಳಿದರೆ ಒಳ್ಳೆಯದು ಎಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ಹಳೆಯ ಬಾಕಿಯನ್ನು ಇಷ್ಟು ದಿವಸಗಳಲ್ಲಿ ಕೊಡುತ್ತೇವೆ. ಮುಂದೆ ಬರುವಂಥಾದ್ದಕ್ಕೂ ಇಷ್ಟು ದಿನಗಳಲ್ಲಿ ಹಣ ಕೊಡುತ್ತೇವೆ ಎಂದು ಹೇಳಿದರೆ ಸಾಕಾಗುತ್ತದೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ : ಬಾಕಿ ಉಳಿದಂಥ ಹಣವನ್ನು ಕೊಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ. ನೀವು ಹೇಳಿದುದನೆಲ್ಲಾ ಪರಿಶೀಲನೆ ಮಾಡಿ ಅವರು ಯೋಗ್ಯ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಮುಖ್ಯಮಂತ್ರಿಗಳು ಈ ಮನೆಯಲ್ಲಿರುವುದರಿಂದ ಕೇಳಿದೆ. ಏಕೆಂದರೆ ಇದು ಗಹನವಾದಂಥ ವಿಷಯ.

ಅಧ್ಯಕ್ಷರು : ಅವರಿಗೆ ಮಾಹಿತಿ ಬೇಕಲ್ಲವೇ? ಸಂಬಂಧಪಟ್ಟ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆ ಬಿಡಿ.

ರೈತರ ಟ್ರ್ಯಾಕ್ಟರ್‌ಗಳಿಗೆ ಇಂಧನ ಸಬ್ಸಿಡಿ ನೀಡುವ ಬಗ್ಗೆ

186 (916) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರಾವಳಿ ಪ್ರದೇಶದ ಮೀನುಗಾರರ ದೋಣಿಗಳಿಗೆ ಬಳಸುವ ಇಂಧನಕ್ಕೆ ಸಬ್ಸಿಡಿ ಕೊಡುತ್ತಿದ್ದು, ಅದೇ ರೀತಿ ರಾಜ್ಯದ ರೈತರ ಟ್ರ್ಯಾಕ್ಟರ್‌ಗೆ ಬಳಸುವ ಇಂಧನಕ್ಕೆ ಸಬ್ಸಿಡಿ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ರಾಜ್ಯದ ರೈತರಿಗೆ ಸಣ್ಣ ಹಿಡುವಳಿ ಮತ್ತು ಅತೀ ಸಣ್ಣ ಹಿಡುವಳಿ ರೈತರೆಂದು ಗುರುತಿನ ಚೀಟಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಚಮತ್ಕಾರ ಹತ್ತಿ ಕಳಪೆ ಬೀಜದಿಂದ ಆದ ನಷ್ಟದ ಪರಿಹಾರ ಹಣವನ್ನು ಸಂಪೂರ್ಣವಾಗಿ ರೈತರಿಗೆ ಕೊಡಲಾಗಿದೆಯೇ;

ಈ) ಹಾಗಿದ್ದರೆ, ಎಷ್ಟು ಜನ ರೈತರಿಗೆ ಕೊಡಲಾಗಿದೆ ಹಾಗೂ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಎಷ್ಟು ಜನ ರೈತರಿಗೆ ನಷ್ಟದ ಪರಿಹಾರ ಹಣವನ್ನು ಕೊಡಲಾಗಿದೆ?